# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂ:110/2017**
**ಪಿ.ಡಬ್ಲ್ಯೂ: 2, ಶಿವಶರಣಪ್ಪ**

ದಿನಾಂಕ :**16-04-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಪಾಟಿ ಸವಾಲು :- ಶ್ರೀ ಮತಿ ಎಮ್ ವಿ ಎಲ್ ವಕೀಲರಿಂದ

ಸಾಕ್ಷಿಗೆ ನಿಪಿ-20 ಕ್ರಯಪತ್ರ ದಾಖಲೆಯನ್ನು ಯಾರು ಕೊಟ್ಟರು ಎಂದು ಕೇಳಲಾಗಿ ವಾದಿ ಪರ ವಕೀಲರು ಕೊಟ್ಟಿದ್ದು ಅದನ್ನು ನಾನು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ವಾದಿ ಶಿವಲಿಲಾ ಇವರ ತಂದೆ ಜಯಶಂಕರ ಪಾಟೀಲ ನನಗೆ ಪರಿಚಯ ಇರುವುದಿಲ್ಲ. ನಿಪಿ-20 ಇದು ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ಮಧ್ಯಾಹ್ನ 12 ರಿಂದ 1 ಗಂಟೆ ಸುಮಾರಿಗೆ ನೊಂದಣಿ ಆಗಿರುತ್ತದೆ. ನಿಪಿ-1 ಮೃತ್ಯು ಪತ್ರವು ಸುಮಾರು 4 ರಿಂದ 5 ಗಂಟೆಯಲ್ಲಿ ನೊಂದಣಿ ಆಗಿರುತ್ತದೆ. ನಾನು ಚಿತ್ತಾಪೂರದಲ್ಲಿ ಕಚೇರಿಯನ್ನು ಹೊಂದಿಲ್ಲ ಊರಿನಿಂದ ನೇರವಾಗಿ ಕೋರ್ಟಿಗೆ ಬರುತ್ತೇನೆ. ನಾನು ಅಪ್ಪಾರಾವ ಪಾಟೀಲ್ ಇವರ ಪರವಾಗಿ ಭೂ ಸ್ವಾಧೀನ ಪ್ರಕರಣದ ವಕಾಲತ್ತು ನಡೆಸಿಲ್ಲ ಎಂದರೆ ಸರಿಯಲ್ಲ.

ನಿಪಿ-1 ವಿಲ್ ಮಾಡಲು ಮಾಹಿತಿಯನ್ನು ಗುಂಡಮ್ಮ ಇವರು ನಿಪಿ-1 ಮಾಡುವ ನಾಲ್ಕೈದು ದಿನ ಮೊದಲು ಬಂದು ಭೇಟಿ ಆಗಿದ್ದರು ಎಂದು ಹೇಳುತ್ತಾರೆ. ನಿಪಿ-1 ವಿಲ್ ತಯಾರು ಮಾಡುವ ಮೊದಲು ನಾನು ಕಚ್ಚಾ ಪ್ರತಿಯನ್ನು ಬರೆದಿಲ್ಲ ನೇರವರಗಿ ಬೆರಳಚ್ಚು ಗಾರರಾದ ಎಮ್ ಬಶೀರ್ ಇವರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತೇನೆ ಎಂದು ಹೇಳುತ್ತಾರೆ. ನಿಪಿ-20 ಕ್ರಯ ಪತ್ರವನ್ನು ಸರ್ವೆ ನಂ 10 ಮತ್ತು 11 ರ ಬಗ್ಗೆ ಮಾಡಿರುತ್ತೇನೆ. ನಿಪಿ-1 ಬರೆಯುವ ಕಾಲಕ್ಕೆ ಗುಂಡಮ್ಮ ಇವರಿಗೆ ಸುಮಾರು 65 ವರ್ಷ ವಯಸ್ಸು ಅಗಿತ್ತು. ನಿಪಿ-1 ಬರೆಯುವ ಮೋದಲು ಗುಂಡಮ್ಮ ಇವರ ಜೋತೆ ಯಾರು ಯಾರು ಬಂದಿದ್ದರು ಎಂದು ಕೇಳಿದ್ದಕ್ಕೆ ಸಾಕ್ಷಿ ಯಾರು ಯಾರು ಎಂದು ನೆನಪಿಲ್ಲ ಎಂದು ಹೇಳುತ್ತಾರೆ. ನಿಪಿ-20 ಮಾಡುವ ಕಾಲಕ್ಕೆ ಗುಂಡಮ್ಮನ ಜೋತೆ ಮೂರ್ನಾಲ್ಕು ಜನ ಬಂದಿದ್ದರು. ಅವರು ಮರೆಪ್ಪ ತಂದೆ ವಿರುಪಾಕ್ಷಪ್ಪ , ಮಹೇಶ ತಂದೆ ಬಸಣ್ಣ, ಭಿಮಯ್ಯ ತಂದೆ ದುರ್ಗಪ್ಪ ವಡ್ಡರ ಇದ್ದರು ಮತ್ತು ಇನ್ನು ಇಬ್ಬರು ಇದ್ದರು ಅವರು ಹೆಸರು ಅಷ್ಟು ನೆನಪಿಲ್ಲ ಎಂದು ಹೇಳುತ್ತಾರೆ.

ಅಪ್ಪಾರಾವ ಮಾಲಿಪಾಟೀಲ ಇವರು ಕಾಳಗಿ ಗ್ರಾಮದವರು. ದಿ-21-07-97 ರಂದು ಗುಂಡಮ್ಮ ಇವರು ನಾನು ಹೇಳಿದ ರೀತಿ ಯಾವುದೇ ಮೃತ್ಯು ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ ಜಯಶಂಕರ ಪಾಟೀಲ ಇವರು ನನ್ನ ಬಳಿ ಕ್ರಯ ಪತ್ರಕ್ಕೆ ಎಂದು ಕರೆದುಕೊಂಡು ಬಂದು ಮೃತ್ಯು ಪತ್ರಕ್ಕೆ ಮೋಸದಿಂದ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

**ಅಸಲು ದಾವಾ ನಂಃ110/2017**
**ಪಿ.ಡಬ್ಲ್ಯೂಃ 2, ಶಿವಶರಣಪ್ಪ**

ನಾನು ಗುಂಡಮ್ಮ ಹೇಳಿದ ರೀತಿಯಲ್ಲಿ ನಿಪಿ-1 ನ್ನು ಬೆರಳಚ್ಚು ಮಾಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗುಂಡಮ್ಮ ಇವರು ಮೂರು ಜನ ಸಾಕ್ಷಿದಾರರ ಸಮಕ್ಷಮ ಹೆಬ್ಬೆಟ್ಟು ಒತ್ತಿರುತ್ತಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆಸ ರಿಯಲ್ಲ. ಸದರಿ ಮೂರು ಜನ ಸಾಕ್ಷಿದಾರರು ಗುಂಡಮ್ಮನ ಸಮಕ್ಷಮದಲ್ಲಿ ನಿಪಿ-1 ಕ್ಕೆ ಸಹಿ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಇದನ್ನು ನಾನು ವಾದಿಯ ತಂದೆ ಜಯಶಂಕರ ಪಾಟೀಲ ಇವರ ಮಾತು ಕೇಳಿ ತಾಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ ಗುಂಡಮ್ಮನೆ ಹೇಳಿದ್ದು ಎಂದು ಹೇಳುತ್ತಾರೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**